**ಸಾಕ್ಷಿಯನ್ನು ದಿನಾಂಕಃ 16.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಬಿ.ಬಿ. ವಕೀಲರಿಂದಃ**

ನನ್ನ ತಂದೆಗೆ 65 ವರ್ಷ. ನನ್ನ ತಂದೆ ಚೆನ್ನಾಗಿ ಓಡಾಡುತ್ತಾರೆ ಆದರೆ ಮಂಡಿ ನೋವು ಇರುತ್ತದೆ. ಈ ಕೇಸಿಗೆ ಸಂಬಂಧಪಟ್ಟಂತೆ ನನಗೆ ಎಲ್ಲಾ ವಿಚಾರ ಗೊತ್ತು ಎಂದರೆ ಸರಿ. ನನಗೆ ಗೊತ್ತಿರುವ ಹಾಗೆ 1 ನೇ ಪ್ರತಿವಾದಿಯ ತಂದೆಯ ಹೆಸರು ಲಿಂಗಣ್ಣ. ದಾವಾ ಆಸ್ತಿಯು ಲಿಂಗಪ್ಪರವರಿಗೆ ಸರ್ಕಾರದಿಂದ ಮಂಜೂರು ಮಾಡಿಕೊಟ್ಟಂತಹ ಆಸ್ತಿ. ಎಷ್ಟನೇ ಇಸವಿಯಲ್ಲಿ ಅವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು 1978 ಎಂದು ನುಡಿಯುತ್ತಾರೆ. ಸ.ನಂ. 18, ಸ.ನಂ. 29/4 ಮತ್ತು ಸ.ನಂ. 4 ಈ ಆಸ್ತಿಗಳು ವಿಭಾಗ ಪತ್ರದ ಮೂಲಕ ಬಂದಂತಹ ಆಸ್ತಿಗಳು ಎಂದು ಹೇಳುವಿರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಆಸ್ತಿಗಳು ಯಾವಾಗ ವಿಭಾಗ ಆಗಿರುತ್ತದೆಂದರೆ ಸಾಕ್ಷಿಯು ದಿನಾಂಕಃ 12.03.1964 ಎಂದು ನುಡಿಯುತ್ತಾರೆ. ದಿನಾಂಕಃ 12.03.1964 ರಂದು ಸದರಿ ಮೇಲೆ ಹೇಳಿದ 03 ಸ.ನಂ. ಆಸ್ತಿಗಳು ವಿಭಾಗ ಆಗಿರುತ್ತದೆಂದು ತಾವು ಹೇಳಿದ್ದು, ವಿಭಾಗ ಪತ್ರದಲ್ಲಿ ಸ.ನಂ. 18, ವಿಸ್ತೀರ್ಣ 03 ಎಕರೆ 31 ಗುಂಟೆ ಮತ್ತು ಸ.ನಂ. 29/4, ವಿಸ್ತೀರ್ಣ 01 ಎಕರೆ 03 ಗುಂಟೆ ಎಂದು ನಮೂದು ಇರುತ್ತದೆಂದರೆ ಸಾಕ್ಷಿಯು ವಿಭಾಗ ಪತ್ರದಲ್ಲಿ ಸ.ನಂ. ನಮೂದು ಮಾಡಿಲ್ಲ ಆದರೆ ಷೆಡ್ಯೂಲ್ / ಚೆಕ್ಕುಬಂದಿಯನ್ನು ನಮೂದು ಮಾಡಿರುತ್ತದೆಂದು ನುಡಿಯುತ್ತಾರೆ. ವಿಭಾಗ ಪತ್ರದಲ್ಲಿ ನಮೂದು ಮಾಡಿರುತ್ತದೆಂದು ಹೇಳಿರುವ ಚೆಕ್ಕುಬಂದಿಯನ್ನು ದಾವಾ ಪತ್ರದಲ್ಲಿ ದಾವಾ ಆಸ್ತಿಗೆ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಚೆಕ್ಕುಬಂದಿ ಬೇರೆ-ಬೇರೆ ಎಂದು ನುಡಿಯುತ್ತಾರೆ. ದಾವಾ ಸ.ನಂ. ಆಸ್ತಿಯಲ್ಲಿ 01 ಎಕರೆ 22 ಗುಂಟೆ ಜಮೀನನ್ನು ತಾಲ್ಲೋಕು ಕಛೇರಿಗೆ ವಿಭಾಗ ಪತ್ರ ನೀಡಿ ಖಾತೆ ಮಾಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ವಿಭಾಗ ಪತ್ರದ ಮೇಲೆ ಖಾತೆ ಮಾಡಲು ಬರುವುದಿಲ್ಲ, ಸಿವಿಲ್ ನ್ಯಾಯಾಲಯದಿಂದ ಆದೇಶ

ಪಡೆಯುವಂತೆ ಹೇಳಿದ್ದರಿಂದ ಈ ದಾವೆ ಹೂಡಿರುತ್ತೇವೆಂದು ನುಡಿಯುತ್ತಾರೆ. ತಾವು ತಾಲ್ಲೋಕು ಕಛೇರಿಗೆ ಖಾತೆ ಮಾಡುವಂತೆ ಅರ್ಜಿ ಕೊಟ್ಟಿದ್ದೆವು ಎಂದು ಹೇಳಿದ್ದು, ಈ ಬಗ್ಗೆ ದಾಖಲೆ ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಹಾಜರು ಮಾಡಿಲ್ಲ, ಮುಂದೆ ಮಾಡುತ್ತೇವೆಂದು ನುಡಿಯುತ್ತಾರೆ. ದಾವಾ ಆಸ್ತಿಯು ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಎಂದು ತೋರಿಸಲು ಏನು ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಕೈ-ಬರಹವಣಿಗೆಯ ಪಹಣಿ, ಎಂ.ಆರ್. ಮತ್ತು ವಿಭಾಗ ಪತ್ರವನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿ ಪರ ವಕೀಲರು ವಾದಿಯು ಹಾಜರುಮಾಡಿರುವ ದಾಖಲೆಗಳನ್ನು ಹಿಡಿದು ತಾವು ಎಲ್ಲಿ ಕೈ-ಬರವಣಿಗೆಯ ಪಹಣಿ ಹಾಜರುಮಾಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಹಾಜರುಮಾಡಿಲ್ಲ, ಹಾಜರುಪಡಿಸುತ್ತೇವೆಂದು ನುಡಿಯುತ್ತಾರೆ. ಇದೇ ಸರಗೂರು ತಾಲ್ಲೋಕು ಕಛೇರಿಯಲ್ಲಿ ಆರ್.ಆರ್.ಟಿ.ನಂ 25/2021-2022 ಎಂದು ಕೇಸು ದಾಖಲಾಗಿ ವಿಚಾರಣೆ ಆಗಿರುತ್ತದೆಂದರೆ ಸರಿ. ಸದರಿ ಪ್ರಕರಣದಲ್ಲಿ ವಿನೋದ್ ಕುಮಾರ್ ತಂದೆ ಅಪ್ಪಾಜಪ್ಪ ಇವರು ಪದ್ಮಾ, ಶಾರದಮ್ಮ ಮತ್ತು ಶಶಿರೇಖಾರವರು ದಾಖಲು ಮಾಡಿದ್ದ ಪ್ರಕರಣದಲ್ಲಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಸದರಿ ವಿನೋದ್ ಕುಮಾರ್ ಇವರು ಹಕ್ಕು-ಖುಲಾಸೆ ಪತ್ರದ ಆಧಾರದ ಮೇಲೆ ಪದ್ಮಾ, ಶಾರದಮ್ಮ ಮತ್ತು ಶಶಿರೇಖಾರವರ ಪರವಾಗಿ ಖಾತೆ ಬದಲಾವಣೆ ಮಾಡದಂತೆ ತಕರಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಲಿಂಗಣ್ಣರವರಿಗೆ ಒಟ್ಟು 07 ಜನ ಮಕ್ಕಳು, ಅವರಲ್ಲಿ ಪದ್ಮಾ, ಶಾರದಮ್ಮ, ನಾಗೇಂದ್ರ, ಸುಭದ್ರ, ದಾಸಪ್ಪ, ಗೀತಾ ಮತ್ತು ಶಶಿರೇಖಾ. ಲಿಂಗಪ್ಪರವರಿಗೆ ಮಂಜೂರಾತಿ ಪತ್ರದ ಮೂಲಕ ಬಂದಂತಹ ಆಸ್ತಿಯನ್ನು ಅವರ ಮಕ್ಕಳಾದ ನಾಗೇಂದ್ರ, ಸುಭದ್ರ, ದಾಸಪ್ಪ ಮತ್ತು ಗೀತಾ ಇವರುಗಳು ಪದ್ಮಾ, ಶಾರದಮ್ಮ ಮತ್ತು ಶಶಿರೇಖಾರವರಿಗೆ ಹಕ್ಕು-ಖುಲಾಸೆ ಪತ್ರ ಮಾಡಿಕೊಡುವ ಮೂಲಕ ಖಾತೆ

ಮಾಡಿಸಿಕೊಳ್ಳುವಂತೆ ಸ.ನಂ. 29/4 ರ ಆಸ್ತಿಯನ್ನು ಕೊಟ್ಟಿದ್ದರು ಎಂದರೆ ಸರಿ. ಅದರ ಪ್ರಕಾರ ಸದರಿ ಪದ್ಮಾ, ಶಾರದಮ್ಮ ಮತ್ತು ಶಶಿರೇಖಾ ಇವರುಗಳು ತಮ್ಮ ಹೆಸರಿಗೆ ಖಾತೆ ಮಾಡಿಕೊಡುವಂತೆ ತಾಲ್ಲೋಕು ಕಛೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸ.ನಂ. 29/4 ರ 03 ಎಕರೆ 18 ಗುಂಟೆ ಜಮೀನು ಪದ್ಮಾ, ಶಾರದಮ್ಮ ಮತ್ತು ಶಶಿರೇಖಾರವರಿಗೆ ಜಂಟೀ ಖಾತೆ ಆಗಿರುತ್ತದೆಂದರೆ ಸರಿ. ಸದರಿ ಖಾತೆಯನ್ನು ಪ್ರತಿವಾದಿಯರು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಕಂದಾಯ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದ್ದು, ಅದು ಸಿವಿಲ್ ನ್ಯಾಯಾಲಯಕ್ಕೆ ಒಳಪಟ್ಟಿರುತ್ತದೆಂದು ಆದೇಶ ಪ್ರತಿಯನ್ನು ನೀಡಿರುತ್ತಾರೆಂದು ನುಡಿಯುತ್ತಾರೆ. ಆರ್.ಆರ್.ಟಿ. 25/2021-2022 ರ ಆದೇಶದಲ್ಲಿ ಪದ್ಮಾ, ಶಾರದಮ್ಮ ಮತ್ತು ಶಶಿರೇಖಾರವರುಗಳ ಹೆಸರಿಗೆ ಹಕ್ಕು-ಖುಲಾಸೆ ಪತ್ರದ ಮೇಲೆ ಖಾತೆ ಮಾಡುವಂತೆ ದಿನಾಂಕಃ 15.03.2022 ರಂದು ಆದೇಶ ಆಗಿರುತ್ತದೆಂದರೆ ಸರಿ. ಸದರಿ ಸ.ನಂ. 29/4 ರ ಜಮೀನಿನಲ್ಲಿ ಪದ್ಮಾ, ಶಾರದಮ್ಮ ಮತ್ತು ಶಶಿರೇಖಾ ಇವರು ಸ್ವಾಧೀನದಲ್ಲಿದ್ದುಕೊಂಡು ವ್ಯವಸಾಯ ಮಾಡುತ್ತಿದ್ದಾರೆಂದರೆ ಸಾಕ್ಷಿಯು ಅವರ ಸಹೋದರರಾದ 2 ನೇ ಪ್ರತಿವಾದಿ - ನಾಗೇಂದ್ರ, 6 ನೇ ಪ್ರತಿವಾದಿ ದಾಸಪ್ಪ 01 ಎಕರೆ 03 ಗುಂಟೆಯಲ್ಲಿ ಮಾತ್ರ ವ್ಯವಸಾಯ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ದಿನಾಂಕಃ 12.05.2022 ರ ತಹಸೀಲ್ದಾರ್, ಸರಗೂರು ಇವರ ಆದೇಶದಲ್ಲಿ ವಾದಿಯರು ಪ್ರತಿವಾದಿಯರ ಸ್ವಾಧೀನಕ್ಕೆ ತೊಂದರೆ ಕೊಡದಂತೆ ಪೋಲೀಸ್ ರಕ್ಷಣೆ ಕೊಡುವಂತೆ ಆದೇಶ ಮಾಡಿದ್ದರು ಎಂದರೆ ಸಾಕ್ಷಿಯು ಆದೇಶ ಮಾಡಿರಲಿಲ್ಲ ಆದರೆ ಪ್ರತಿವಾದಿಯರು ತಾಲ್ಲೋಕು ಕಛೇರಿಗೆ ರಕ್ಷಣೆ ಕೊಡುವಂತೆ ಅರ್ಜಿ ಕೊಟ್ಟಿದ್ದರಿಂದ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ತಾಲ್ಲೋಕು ದಂಡಾಧಿಕಾರಿ, ಸರಗೂರು, ಇವರು ತಮ್ಮ ಕಛೇರಿ ಪತ್ರದಲ್ಲಿ ಸರಗೂರು ಪೋಲೀಸರಿಗೆ ಪ್ರತಿವಾದಿಯರ ಸ್ವಾಧೀನಕ್ಕೆ ವಾದಿಯರು ತೊಂದರೆ ಕೊಡದಂತೆ ರಕ್ಷಣೆ ಕೊಡುವಂತೆ ಆದೇಶ ಮಾಡಿದ್ದರು ಎಂದರೆ

ಸಾಕ್ಷಿಯು ಆದೇಶ ಮಾಡಿಲ್ಲ, ಬದಲಾಗಿ ಸ್ಥಳಕ್ಕೆ ಹೋಗಿ ವಸ್ತು ಸ್ಥಿತಿ ಇರುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಯ ಕೈಗೊಳ್ಳುವಂತೆ ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಸ.ನಂ. 18ರ ಜಮೀನನ್ನು ವಾದಿಯರ ಹೆಸರಿಗೆ ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಸ.ನಂ. 18ರ ಜಮೀನಿನಲ್ಲಿ ಅಪ್ಪಾಜಪ್ಪರವರ ಮಕ್ಕಳಾದ ಕೂಸಮ್ಮ, ಸರೋಜಮ್ಮ, ಲೋಲಮ್ಮ, ಶಾಂತಮ್ಮ, ಕಲಾವತಿ, ವಿನೋದ, ವೆಂಕಟೇಶ ಮತ್ತು ನಾಗರತ್ನ ಇವರ ಹೆಸರಿಗೆ 04 ಎಕರೆ 04 ಗುಂಟೆ ಖಾತೆಯಾಗಿರುತ್ತದೆಂದು ನುಡಿಯುತ್ತಾರೆ. ಸ.ನಂ. 4ರ ಜಮೀನು ಮುದ್ದಪ್ಪನ ಮಗ ಮಂಜುನಾಥರವರ ಹೆಸರಿಗೆ ಖಾತೆ ಆಗಿರುತ್ತದೆ. ಸ.ನಂ. 18 ಮತ್ತು ಸ.ನಂ. 4 ಆಸ್ತಿಗಳು, ತಮ್ಮ ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿ. ಸ.ನಂ. 18ರಲ್ಲಿ ಉಳಿಕೆ 04 ಎಕರೆ 01 ಗುಂಟೆ ಯಾರ ಹೆಸರಿನಲ್ಲಿ ಖಾತೆ ಇರುತ್ತದೆಂದರೆ 2ನೇ ಪ್ರತಿವಾದಿ ನಾಗೇಂದ್ರರವರ ಹೆಸರಿಗೆ ಖಾತೆ ಇರುತ್ತದೆಂದು ನುಡಿಯುತ್ತಾರೆ. ಸ.ನಂ. 18 ಮತ್ತು ಸ.ನಂ. 4 ರ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ನಕಾಶೆ ಆಗಿಲ್ಲ ಎಂದರೆ ಸಾಕ್ಷಿಯು ಆಗಿರುತ್ತದೆಂದು ನುಡಿಯುತ್ತಾರೆ. ಹಾಗಾದರೆ ಸದರಿ ನಕಾಶೆಯನ್ನು ತಾವು ಹಾಜರುಮಾಡುತ್ತೀರಾ ಎಂದು ಪ್ರತಿವಾದಿ ಪರ ವಕೀಲರು ಕೇಳಲಾಗಿ ಸಾಕ್ಷಿಯು ಮುಂದೆ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ವಾದಿಯರ ಹೆಸರಿಗೆ ಆಸ್ತಿಗಳು ಯಾವಾಗ ಖಾತೆಯಾಗಿರುತ್ತದೆಂದು ಕೇಳಲಾಗಿ ಸಾಕ್ಷಿಯು 1989 ರಲ್ಲಿ ಖಾತೆ ಆಗಿರುತ್ತದೆಂದು ನುಡಿಯುತ್ತಾರೆ. ನಿಂಗಪ್ಪ, ಅಪ್ಪಾಜಪ್ಪ, ಇವರುಗಳು ಸತ್ತ ನಂತರ ಅವರ ಮಕ್ಕಳಿಗೆ ಖಾತೆ ಆಗಿರುತ್ತದೆಂದರೆ ಸರಿ. ಸ.ನಂ. 29/4 ಅಸ್ತಿಗೆ ಸಂಬಂಧಪಟ್ಟಂತೆ ನಿಂಗಪ್ಪರವರ ಹೆಸರಿಗೆ 1978 ರಲ್ಲಿ ಗ್ರಾಂಟ್ ಪತ್ರದ ಮೂಲಕ ಮಂಜೂರಾಗಿರುತ್ತದೆಂದರೆ ಸರಿ. ಸಾಕ್ಷಿಯು ಮುಂದುವರಿದು ಅದಕ್ಕೂ ಪೂರ್ವದಲ್ಲಿ ಒಟ್ಟು ಕುಟುಂಬದ ಬಗರ್-ಹುಕ್ಕಂನಲ್ಲಿ ಆಸ್ತಿ ಇತ್ತು ಎಂದು ನುಡಿಯುತ್ತಾರೆ. 1964 ರಲ್ಲಿ ವಿಭಾಗ ಆಗಿರುತ್ತದೆಂದು ತಾವೇ ಈ ಮೇಲೆ ಹೇಳಿದ್ದು, 1964 ರಿಂದ ಕಾಳೇಗೌಡರ ಮಕ್ಕಳು ಪ್ರತ್ಯೇಕವಾಗಿ ವಾಸ ಇದ್ದರು

ಎಂದರೆ ಸರಿ. 1978 ರಲ್ಲಿ ನಿಂಗಪ್ಪರವರ ಹೆಸರಿಗೆ ಮಂಜೂರಾತಿ ಪತ್ರ ಕೊಟ್ಟಿದ್ದು, ಸದರಿ ಪತ್ರವನ್ನು ತಾವು ಕಂದಾಯ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನನ್ನ ತಾತ ಅವಿದ್ಯಾವಂತ ಇದ್ದುದರಿಂದ ಪ್ರಶ್ನೆ ಮಾಡಿಲ್ಲ ಎಂದು ನುಡಿಯುತ್ತಾರೆ. ಮಂಜೂರಾತಿ ಪತ್ರ ಆಧಾರದ ಮೇಲೆ ನಿಂಗಪ್ಪರವರ ಮರಣಾ ನಂತರ ಅವರ ಮಕ್ಕಳ ಹೆಸರಿಗೆ ಪೌತಿ ಖಾತೆ ಆಗಿರುತ್ತದೆಂದರೆ ಸಾಕ್ಷಿಯು ನಿಂಗಪ್ಪರವರು ಸತ್ತ 30 ವರ್ಷಗಳ ನಂತರ ಪೌತಿ ಖಾತೆ ಆಗಿರುತ್ತದೆಂದು ನುಡಿಯುತ್ತಾರೆ. ದಿನಾಂಕಃ 20.11.2004 ರಂದು ಸ.ನಂ. 29 ಆಸ್ತಿಯು ದುರಸ್ತ್ ಆಗಿರುತ್ತದೆಂದರೆ ಸರಿಯಲ್ಲ. ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯ ಪ್ರಕಾರ ಎಂ.ಆರ್. 17/2004-2005 ರ ರೀತ್ಯಾ ಸ.ನಂ. 29 ದುರಸ್ತ್ ಆಗಿ ಸ.ನಂ. 29/4 ಎಂದು ಒಟ್ಟು 03 ಎಕರೆ ನಿಂಗಪ್ಪರವರ ಹೆಸರಿಗೆ ಖಾತೆ ಆಗಿರುವ ಬಗ್ಗೆ ನಮೂದು ಇರುತ್ತದೆಂದು ತೋರಿಸಿ ಕೇಳಲಾಗಿ ಸಾಕ್ಷಿಯು ಓದಿ ನೋಡಿ ಹೌದು ಎಂದು ಒಪ್ಪುತ್ತಾರೆ, ಹಾಗಾಗಿ ಸದರಿ ದಾಖಲೆಯನ್ನು confront ಮಾಡುವ ಮೂಲಕ ಸದರಿ ದಾಖಲೆಯನ್ನು **ನಿ.ಡಿ.-1** ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**